ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರಃ65/2016

ಚಾಸಾಃ 6 ಪ್ರಾಸಾಃ5

ದಿನಾಂಕಃ 18.11.2023

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ಸುಶೀಲ |
| ಗಂಡನ ಹೆಸರು | : | ರಾಮ |
| ವಯಸ್ಸು | : | 56 ವರ್ಷ |
| ಉದ್ಯೋಗ | : | ಕೂಲಿ |
| ವಾಸ ಸ್ಥಳ | : | ಕುಂದಾಪುರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ಚಾಸಾ-1 ನನ್ನ ತಂಗಿ. ಚಾಸಾ-2 ನನ್ನ ತಾಯಿ. ಚಾಸಾ-3 ನನ್ನ ತಂದೆ. ಚಾಸಾ-4 ನನ್ನ ತಮ್ಮ. ಚಾಸಾ-5 ನನ್ನ ತಂಗಿ. ಚಾಸಾ-7 ರಿಂದ 9 ನಮ್ಮ ಪಕ್ಕದ ಮನೆಯವರು. ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿ ಚಾಸಾ-1 ರವರ ಅತ್ತಿಗೆ. ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಘಟನೆ ನಡೆದಿಲ್ಲ. ನನಗೆ ಸಮನ್ಸ್ ಬಂದಾಗ ಈ ಪ್ರಕರಣದ ಬಗ್ಗೆ ಗೊತ್ತಾಗಿರುತ್ತದೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ**

ದಿಃ 24-02-2012 ರಂದು ತ್ರಾಸಿ ಅಣ್ಣಪ್ಪಯ್ಯ ಸಭಾ ಭವನದಲ್ಲಿ ಚಾಸಾ-1 ಮತ್ತು 1 ನೇ ಆರೋಪಿಯ ಮದುವೆ ನಡೆದಿರುತ್ತದೆ ಎಂದರೆ ಸರಿ. ಮದುವೆಗಿಂತ 2 ತಿಂಗಳ

ಮೊದಲು ನಮ್ಮ ಮನೆಯಲ್ಲಿ ನಿಶ್ಚಿತಾರ್ಥ ನಡೆದಿದ್ದು, ಆ ಸಮಯದಲ್ಲಿ ಆರೋಪಿತರು ವರದಿಕ್ಷಿಣೆಗೆ ಬೇಡಿಕೆ ಇಟ್ಟಿದ್ದು, ನಾವು ವರದಕ್ಷಿಣೆ ಕೊಡುವುದಿಲ್ಲವೆಂದು ಹೇಳಿದಾಗ 1 ನೇ ಆರೋಪಿ ಮದುವೆ ನಿರಾಕರಿಸಿದ್ದು, ಆಗ ಚಾಸಾ-1 ರವರ ಮದುವೆ ನಿಲ್ಲಬಾರದೆಂದು 8 ಪವನ್ ಚಿನ್ನ, 1,30,000/- ಹಣವನ್ನು ಕೊಡಲು ಒಪ್ಪಿ, ಮದುವೆಯ 15 ದಿನಗಳ ಮೊದಲು ಆರೋಪಿತರು ನಮ್ಮ ಮನೆಗೆ ಬಂದು 45,000/- ಹಣವನ್ನು ಪಡೆದಿದ್ದು, ಉಳಿದ ಹಣವನ್ನು ಚೆಕ್ಕು ಮುಖಾಂತರ ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ಮದುವೆ ಸಮಯದಲ್ಲಿ ಚಾಸಾ-1 ರವರಿಗೆ 8 ಪವನ್ ಚಿನ್ನ ಹಾಕಿರುತ್ತೇವೆಂದರೆ ಸರಿಯಲ್ಲ.

ಮದುವೆಯ ನಂತರ ಚಾಸಾ-1 ಆಕೆಯ ಗಂಡನ ಮನೆಯಲ್ಲಿ ಇದ್ದಾಗ ಸ್ವಲ್ಪ ದಿನ ಚೆನ್ನಾಗಿ ನೋಡಿಕೊಂಡು, ಚಾಸಾ-1 ರವರಿಗೆ ಹೆಣ್ಣು ಮಗು ಜನಿಸಿದ ಬಳಿಕ ಆರೋಪಿತರು ಆಕೆಗೆ ಮೂದಲಿಸಿ ನಮ್ಮ ಮನೆಯಲ್ಲಿ ಇರುವುದು ಬೇಡ ತವರು ಮನೆಗೆ ಹೋಗು, ಹೆಣ್ಣು ಮಗುವಿನ ಜೊತೆಯಲ್ಲಿ ಬಾಳ್ವೆ ನಡೆಸಬೇಕಾದರೆ 2 ಲಕ್ಷ ವರದಕ್ಷಿಣೆ ತರಬೇಕೆಂದು ಮಾನಸಿಕವಾಗಿ ಹಿಂಸೆ ನೀಡಿದ್ದು, ಚಾಸಾ-1 ತವರು ಮನೆಗೆ ಬಂದು ಆರೋಪಿತರು ತಮಗೆ ಕೊಡುತ್ತಿದ್ದ ಹಿಂಸೆಯನ್ನು ಸಹಿಸಲಾಗದೆ ಅತ್ತು ಹೇಳುತ್ತಿದ್ದರು ಎಂದರೆ ಸರಿಯಲ್ಲ. ನಾವು ನಮ್ಮ ಬಳಿ ಅಷ್ಟು ಹಣ ಇಲ್ಲ ಎಂದು ಹೇಳಿದರೂ ಆರೋಪಿತರು ದಿಃ 15-01-2013 ರಂದು ಸಂಜೆ 4 ಗಂಟೆಗೆ ಚಾಸಾ-1 ಮತ್ತು ಅವರ ಮಗುವನ್ನು ತವರು ಮನೆಗೆ ತಂದು ಬಿಟ್ಟಿದ್ದು, 2 ಲಕ್ಷ ಹೆಚ್ಚುವರಿ ವರದಕ್ಷಿಣೆ ತರದೆ ಬಂದಲ್ಲಿ ಕೊಲ್ಲುವುದಾಗಿ ಬೆದರಿಕೆ ಹಾಕಿದ್ದರು ಎಂದರೆ ಸರಿಯಲ್ಲ.

2 ನೇ ಆರೋಪಿ ಚಾಸಾ-1 ರವರಿಗೆ ವರದಕ್ಷಿಣೆ ಹಣ ಕೊಡದೆ ಇದ್ದಲ್ಲಿ ನಿನ್ನ ಮಗುವಿನೊಂದಿಗೆ ತಾಯಿ ಮನೆಯಲ್ಲಿ ಇರಬೇಕು, ನಿನ್ನ ಗಂಡನನ್ನು ಕಳುಹಿಸುವುದಿಲ್ಲ, ನೀನು ಸತ್ತರೆ ಕೂಡ ಬರುವುದಿಲ್ಲ, ನಿನಗೆ ಗಂಡನ ಜೊತೆ ಬಾಳ್ವೆ ಮಾಡಲು ಬಿಡುವುದಿಲ್ಲ, ಪೊಲೀಸ್ ಠಾಣೆಯಲ್ಲಿ ಕೇಸು ಮಾಡಿದರೆ ನಿನ್ನನ್ನು ಮತ್ತು ಮಗುವನ್ನು ಸಾಯಿಸುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಕೆಲವು ದಿನಗಳ ಬಳಿಕ ಚಾಸಾ-1 ಮಗುವಿನ ಜೊತೆ ಗಂಡನ ಮನೆಗೆ ಹೋಗಿದ್ದು, ಗಂಡನ ಜೊತೆಯಲ್ಲಿ ಜೀವನ ನಡೆಸಲು ಅವಕಾಶ ಕೊಡುವಂತೆ ಬೇಡಿ ಕೊಂಡರೂ 2 ಲಕ್ಷ ವರದಕ್ಷಿಣೆ ಹಣ ತರಬೇಕೆಂದು ಮನೆಯ ಒಳಗೆ ಬಿಡದೆ ವಾಪಸ್ಸು ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ1 ಮಗುವಿನೊಂದಿಗೆ ತವರು ಮನೆಯಲ್ಲಿ ಉಳಿದಿದ್ದು ಆರೋಪಿತರು ಆಗಾಗ ನಮ್ಮ ಮನೆಗೆ ಬಂದು ವರದಕ್ಷಿಣೆ ಹಣಕ್ಕಾಗಿ ಚಾಸಾ-1 ರವರಿಗೆ ಮಾನಸಿಕ ಹಿಂಸೆ ನೀಡಿದ್ದು, ಚಾಸಾ-1 ಸ್ತ್ರಿಶಕ್ತಿ ಮೂಲಕ ಗಂಗೊಳ್ಳಿ ಪೊಲೀಸ್ ಠಾಣೆಯಲ್ಲಿ ಮತ್ತು ಸಾಂತ್ವನ ಕೇಂದ್ರದಲ್ಲಿ ದೂರು ನೀಡಿದ್ದು, ಆಗ ಆರೋಪಿತರು ಚಾಸಾ-1 ರವರನ್ನು ಒಳ್ಳೆಯ ರೀತಿಯಲ್ಲಿ ನೋಡಿಕೊಳ್ಳುವುದಾಗಿ ತಿಳಿಸಿದ್ದು, 1 ನೇ ಆರೋಪಿ ಮುಂಬೈಯಲ್ಲಿ ಕೆಲಸ ಮಾಡುತ್ತಿದ್ದು, ಅಲ್ಲಿಗೆ ಬರುವಂತೆ ತಿಳಿಸಿ ಚಾಸಾ-1

ರವರು ಹೋದಾಗ ಅಲ್ಲಿ ಕೂಡ ಅವರನ್ನು ಸರಿಯಾಗಿ ನೋಡಿಕೊಳ್ಳದೆ ವಾಪಸ್ಸು ಊರಿಗೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರನ್ನು ಕರೆದುಕೊಂಡು ಹೋಗುವುದಾಗಿ ಹೇಳಿ ನಂತರ ವರದಕ್ಷಿಣೆಗಾಗಿ ಮಾನಸಿಕವಾಗಿ ಮತ್ತು ದೈಹಿಕವಾಗಿ ಕಿರುಕುಳ ನೀಡಿ ಆಕೆಯನ್ನು ಮನೆಯಿಂದ ಹೊರಗೆ ಹಾಕಿ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿದಾಗ ಈ ಮೇಲೆ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು. ಈಗ ನಾವು ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಆ ಕಾರಣಕ್ಕೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**